# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ನಂ.ಕಂ.ಪಹಣಿ:ಅಪೀಲು:86/2011-12 ದಿನಾಂಕ:07.04.2016.

**ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**

**ಸಹಾಯಕ ಆಯುಕ್ತರು, ಹೊಸಪೇಟೆ**

******

**ವಾದಿಗಳು: ಶ್ರೀ/ ಶ್ರೀಮತಿ**

1. ಕೆ.ಮೂಗಪ್ಪ ತಂದೆ ಸಣ್ಣ ಕರಿಯಪ್ಪ,
2. ಕೆ.ತಿಪ್ಪೇಸ್ವಾಮಿ ತಂದೆ ಸಣ್ಣ ಕರಿಯಪ್ಪ,

**ಉಭಯರ ವಾಸ:** ಈಚಲಬೊಮ್ಮನಹಳ್ಳಿ, ಕುಪ್ಪಿನಕೆರೆ ಗ್ರಾಮ, ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ.

**[ ಶ್ರೀ ಬಿ.ವೀರೇಶಪ್ಪ, ವಕೀಲರು, ಹೊಸಪೇಟೆ ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ಅಂಜಿನಪ್ಪ ತಂದೆ ಸಣ್ಣ ಮೂಗಪ್ಪ,
2. ದೊಡ್ಡ ಹುಲುಗಪ್ಪ ತಂದೆ ಸಣ್ಣ ಮೂಗಪ್ಪ,
3. ಸಣ್ಣ ಹುಲುಗಪ್ಪ ತಂದೆ ಸಣ್ಣ ಮೂಗಪ್ಪ,

**ಮೇಲಿನ ಎಲ್ಲರ ವಾಸ:** ಈಚಲಬೊಮ್ಮನಹಳ್ಳಿ, ಕುಪ್ಪಿನಕೆರೆ ಗ್ರಾಮ, ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ.

**[ ಪ್ರತಿವಾದಿ-1 ರಿಂದ 3 ರವರ ಪರ ವಕೀಲರು, ಶ್ರೀಮತಿ ಕೆ.ಬಿ.ಸಾವಿತ್ರಿ ಬಾಯಿ , ವಕೀಲರು, ಕೂಡ್ಲಿಗಿ ]**

4. ತಹಶೀಲ್ದಾರರು, ಕೂಡ್ಲಿಗಿ.

**ವ್ಯಾಜ್ಯದ ಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಕೂಡ್ಲಿಗಿ | ಕೂಡ್ಲಿಗಿ | ಹಿರೇಹೆಗ್ಡಾಳು | 446/2 | 03 ಎಕರೆ 66 ಸೆಂಟ್ಸ್ |
| | | | 446/3 | 03 ಎಕರೆ 66 ಸೆಂಟ್ಸ್ |

**ಪೀಠಿಕೆ:-**

ಕೂಡ್ಲಿಗಿ ತಾಲೂಕು ಕೂಡ್ಲಿಗಿ ಹೋಬಳಿ ಹಿರೇಹೆಗ್ಡಾಳು ಗ್ರಾಮದ ವಿವಾದಾಸ್ಪದ ಜಮೀನು ಸ.ನಂ.446/2 ವಿಸ್ತೀರ್ಣ: 03 ಎಕರೆ 66 ಸೆಂಟ್ಸ್; ಸ.ನಂ. 446/3 ವಿಸ್ತೀರ್ಣ: 03 ಎಕರೆ 66 ಸೆಂಟ್ಸ್; ಜಮೀನುಗಳಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕೂಡ್ಲಿಗಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: 64/2010-11 ದಿನಾಂಕ:12.05.2010 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136[2] ರಡಿಯಲ್ಲಿ ಅಪೀಲುದಾರರ ಪರ ವಕೀಲರು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:26.09.2011 ಕ್ಕೆ ನಿಗಧಿಪಡಿಸಿ ಉಭಯ ಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಆದರೆ, ವಾದಿಪರ ವಕೀಲರು ದಿನಾಂಕ:15.03.2016 ರಂದು ವಿಚಾರಣೆ ಸಂದರ್ಭದಲ್ಲಿ ಹಾಜರಾಗಿ, ಮಾನ್ಯ ಉಚ್ಚನ್ಯಾಯಾಲಯ ಕರ್ನಾಟಕ, ಧಾರವಾಡ ಇವರಲ್ಲಿ ಆರ್.ಎಸ್.ಎ.ನಂ.5546/2011 ದಿನಾಂಕ:04.01.2016 ರಂದು ಉಭಯ ಪಕ್ಷಗಾರರು ರಾಜೀಯಾಗಿರುವುದರಿಂದ ಸದರಿ ಪಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಕೋರಿ ಮನವಿ ಸಲ್ಲಿಸಿರುತ್ತಾರೆ. ಆದುದರಿಂದ, ಈ ಕೆಳಕಂಡಂತೆ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ವಾದಿಪರ ವಕೀಲರು ಸದರಿ ಪಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಕೋರಿ ಮನವಿ ಸಲ್ಲಿಸಿರುವುದರಿಂದ, ಸದರಿ ಅಪೀಲನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:07.04.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ ]
ಸಹಾಯಕ ಆಯುಕ್ತರು,
ಹೊಸಪೇಟೆ.

ವಾದಿ: ಪ್ರತಿವಾದಿಗಳಿಗೆ

**ಪ್ರತಿಯನ್ನು:-** ತಹಶೀಲ್ದಾರರು, ಕೂಡ್ಲಿಗಿ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.